**ಪಾಠ–4** **ಜನವರಿ 15–21**

# ಯೇಸು ನಮ್ಮ ನಂಬಿಗಸ್ತ ಸೋದರ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಯಾಜ.ಕಾಂಡ 25:25–27, ಇಬ್ರಿಯ 2:14–16, ಇಬ್ರಿಯ 11:24–26, 1 ಕೊರಿಂಥ 15:50, ಇಬ್ರಿಯ 5:8,9, ಇಬ್ರಿಯ 12:1–4.

**ಸ್ಮರಣವಾಕ್ಯ : "ಇದಲ್ಲದೆ ಮಕ್ಕಳು ರಕ್ತ ಮಾಂಸಧಾರಿಗಳಾಗುವುದರಿಂದ ಆತನೂ ಅವರಂತೆಯೇ ಆದನು. ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿ ಬಿಡುವುದಕ್ಕೂ ರಕ್ತ ಮಾಂಸಧಾರಿಯಾದನು"** (ಇಬ್ರಿಯ 2:14,15).

ಇಬ್ರಿಯ 1ನೇ ಅಧ್ಯಾಯವು ಯೇಸುವು ದೇವರ ಮಗನೆಂದೂ, ದೇವದೂತರನ್ನೂ ಆಳುವವನು ದೇವರ ಪ್ರಭಾವ ಪ್ರಕಾಶವೂ ಆತನ ಸ್ವಭಾವದ ಪ್ರತಿರೂಪವೂ ಆಗಿದ್ದಾನೆಂದು ಹೇಳುತ್ತದೆ (ಇಬ್ರಿಯ 1:3). ಇಬ್ರಿಯ 2ನೇ ಅಧ್ಯಾಯವು ಯೇಸುವು ಮನುಷ್ಯ ಕುಮಾರನೆಂದು, ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಸೃಷ್ಟಿಸಲ್ಪಟ್ಟವನೂ ಮನುಷ್ಯಸ್ವಭಾವವನ್ನು ಅದರ ಬಲಹೀನತೆಗಳ ಸಹಿತ ಮರಣದ ಮಟ್ಟಕ್ಕೂ ಅಂಗೀಕರಿಸಿದವನೆಂದು (ಇಬ್ರಿಯ 2:7) ಹೇಳುತ್ತದೆ.

ಇಬ್ರಿಯ 1ನೇ ಅಧ್ಯಾಯದಲ್ಲಿ ದೇವರು ಯೇಸುವನ್ನು ಕುರಿತು "ನನಗೆ ನೀನು ಮಗನು" (ಇಬ್ರಿಯ 1:5) ಇಬ್ರಿಯ 2ನೇ ಅಧ್ಯಾಯದಲ್ಲಿ ಯೇಸುವು ಮನುಷ್ಯ ಪುತ್ರರನ್ನು ತನ್ನ ಸಹೋದರರೆಂದು ಕರೆಯುತ್ತಾನೆ (ಇಬ್ರಿ 2:12).

* ಈ ವಾರದ ಪಾಠವನ್ನು ಜನವರಿ 22ರ ಸಬ್ಬತ್ತಿಗಾಗಿ ಸಿದ್ಧಪಡಿಸಿಕೊಳ್ಳಿರಿ.

ಇಬ್ರಿಯ 1ನೇ ಅಧ್ಯಾಯದಲ್ಲಿ ತಂದೆಯು ಮಗನ ಸಾರ್ವಭೌಮತ್ವವನ್ನು ಸಾರಿ ಹೇಳುತ್ತಾನೆ (ಇಬ್ರಿಯ 1:8–12). ಇಬ್ರಿಯ 2ನೇ ಅಧ್ಯಾಯದಲ್ಲಿ ಮಗನು ತಂದೆಯ ಮೇಲಿನ ನಂಬಿಕಸ್ತಿಕೆಯನ್ನು ದೃಢಪಡಿಸುತ್ತಾನೆ.

ಇಬ್ರಿಯ 1ರಲ್ಲಿ ಯೇಸುವು ದಿವ್ಯಕರ್ತನು, ಸೃಷ್ಟಿಕರ್ತನು, ಉಳಿಸುವಾತನು ಮತ್ತು ಸಾರ್ವಭೌಮನೂ ಆಗಿದ್ದಾನೆ. ಇಬ್ರಿಯ 2ರಲ್ಲಿ ಯೇಸುವು ಕರುಣೆಯುಳ್ಳ, ನಂಬಿಕಸ್ತಿಕನಾದ ಮಾನವ ಮಹಾಯಾಜಕನು. ಸಂಕ್ಷಿಪ್ತವಾಗಿ, ಯೇಸುಕ್ರಿಸ್ತನ ಕರುಣೆಯುಳ್ಳ ನಂಬಿಕಸ್ತ ಸೋದರನ ಬಿಂಬವು ಮಗನನ್ನು ನಿತ್ಯಕರ್ತನಾದ ದೇವರಾಗಿ ತೋರ್ಪಡಿಸುವ ವಿವರಣೆಯಲ್ಲಿ ಚಿತ್ರಿಸಲಾಗಿದೆ (ಇಬ್ರಿಯ 1:1–4).

**ಭಾನುವಾರ** **ಜನವರಿ 16**

## ಒಬ್ಬ ವಿಮೋಚಕನಾಗಿರುವ ಸೋದರ

ಓದಿರಿ : ಯಾಜಕಕಾಂಡ 25:25–27, 47–49 ವಚನಗಳು. ಯಾವನಾದರೂ ಬಡತನದ ನಿಮಿತ್ತ ತನ್ನ ಆಸ್ತಿಯನ್ನಾಗಲೀ ಸ್ವಾತಂತ್ರ್ಯವನ್ನಾಗಲೀ ಕಳೆದುಕೊಂಡ ಒಬ್ಬ ವ್ಯಕ್ತಿ ಮತ್ತೊಬ್ಬನನ್ನು ಬಿಡಿಸಬಹುದೆ?

ಒಬ್ಬ ವ್ಯಕ್ತಿಯು ತನ್ನ ಜೀವನೋಪಾಯಕ್ಕೆ ತನ್ನ ಆಸ್ತಿಯನ್ನೇ ಮಾರಿಕೊಳ್ಳುವಷ್ಟು ಅಥವಾ ತನ್ನನ್ನೇ ತಾನು ಮಾರಿಕೊಳ್ಳುವಷ್ಟು ಬಡವನಾಗಿ ಆತನು ತನ್ನ ಆಸ್ತಿಯನ್ನು ಅಥವಾ ಸ್ವಾತಂತ್ರ್ಯವನ್ನು 50 ವರ್ಷಗಳು ತುಂಬಿದ ಬಳಿಕ ಜ್ಯೂಬಿಲಿ ಸಂವತ್ಸರದಲ್ಲಿ ಹಿಂದಕ್ಕೆ ಪಡೆಯಬಹುದೆಂದು ಮೋಶೆಯ ಧರ್ಮಶಾಸ್ತ್ರ ಹೇಳುತ್ತದೆ. ಜ್ಯುಬಿಲಿ ಸಂವತ್ಸರವು ಸಾಲಗಳನ್ನು ಮನ್ನ ಮಾಡುವ ಅಸ್ತಿಗಳ ಹಕ್ಕನ್ನು ಹಿಂದಕ್ಕೆ ಪಡೆಯುವ, ದಾಸತ್ವದಲ್ಲಿರುವವರನ್ನು ಅದರಿಂದ ಮುಕ್ತರನ್ನಾಗಿಸುವ ಒಂದು ಮಹಾಸಂಭ್ರಮಪಡುವ ಸಬ್ಬತ್ತಾಗಿರುತ್ತದೆ.

ಐವತ್ತು ವರ್ಷಗಲು ಕಾಯುವುದಕ್ಕೆ ತುಂಬಾ ದೀರ್ಘವಾದ ಅವಧಿಯಾಗಿತ್ತು. ಆದುದರಿಂದಲೇ ಮೋಶೆಯ ಧರ್ಮಶಾಸ್ತ್ರವು ಅದಕ್ಕೂ ಪರಿಹಾರವನ್ನು ಸೂಚಿಸುತ್ತದೆ. ಸಾಲಿಗನ ಸಮೀಪ ಬಂಧುವು ಅವನು ಕೊಡಬೇಕಾದ ಹಣವನ್ನು ಸಂದಾಯ ಮಾಡಿ ಅಥವಾ ಈಡುಕೊಟ್ಟು ಅವನನ್ನು ಮುಂಚಿತವಾಗಿ ಬಿಡಿಸಬಹುದಾಗಿತ್ತು.

ಒಂದು ವೇಳೆ ಒಬ್ಬ ವ್ಯಕ್ತಿಯು ಯಾರಿಂದಲಾದರೂ ಹತ್ಯೆಯಾಗಿದ್ದ ಪಕ್ಷದಲ್ಲಿ ಅವನ ಹತ್ಯೆಗೆ ನ್ಯಾಯುಸಿಗುವಂತೆ ಮಾಡುತ್ತಿದ್ದವನೂ ಸಹ ಸಮೀಪ ಬಂಧುವಾಗಿರುತ್ತಿದ್ದನು. ಆತನು ತನ್ನ ಬಂಧುವನ್ನು ಹತ್ಯೆಗೈದವನನ್ನು ಆತನ ರಕ್ತಕ್ಕಾಗಿ ಬಿಡದೆ ಮುಯ್ಯಿಗೆ ಮುಯ್ಯಿ ತೀರಿಸಬೇಕಾಗಿತ್ತು (ಅರಣ್ಯಕಾಂಡ 25:9–15).

ಓದಿರಿ : ಇಬ್ರಿಯ 2:14–16 ವಚನಗಳು. ಈ ವಚನಗಳು ಯೇಸುವನ್ನು ಮತ್ತು ನಮ್ಮನ್ನು ಹೇಗೆ ವರ್ಣಿಸುತ್ತವೆ?

ಈ ವಚನಗಳು ನಮ್ಮನ್ನು ಸೈತಾನನ ದಾಸತ್ವದಲ್ಲಿ ಬಿದ್ದಿರುವವರೆಂದು ವರ್ಣಿಸುತ್ತವೆ. ಆದಾಮನು ಪಾಪದಲ್ಲಿ ಬಿದ್ದಾಗ ಮಾನವ ಕುಲವು ಸೈತಾನನ ಅಧಿಕಾರದಲ್ಲಿ ಬಂಧಿಗಳಾಗಿದ್ದಾರೆ. ಅದರ ಫಲಿತಾಂಶದಿಂದ ಇಂದು ನಾವು ಪಾಪವನ್ನು ಪ್ರತಿರೋಧಿಸಲಾರೆವು (ರೋಮ 7:14–24). ನಾವು ತೆರಲಾರದ ಮರಣದಂಡನೆಯನ್ನು ನಾವು ಮಾಡಿದ ಉಲ್ಲಂಘನೆಯು ನಮಗೆ ವಿಧಿಸಿದೆ (ರೋಮ 6:24). ಹಾಗಾಗಿ ನಮ್ಮ ಪರಿಸ್ಥಿತಿಯು ಬಹಳ ನಿರಾಶದಾಯಕ–ವಾದುದಾಗಿತ್ತು.

ಯೇಸುಕ್ರಿಸ್ತನು ಮಾನವ ಸ್ವಭಾವವನ್ನು ತೆಗೆದುಕೊಂಡು ನಮಗೋಸ್ಕರ ರಕ್ತಮಾಂಸಧಾರಿಯಾದನು. ಆತನು ನಮ್ಮನ್ನು ವಿಮೋಚಿಸುವ ಸಮೀಪ ಬಂಧುವಾದನು. ಆತನು ನಮ್ಮನ್ನು ಸೋದರರು ಎಂದು ಕರೆಯಲು ನಾಚಿಕೊಳ್ಳಲಿಲ್ಲ (ಇಬ್ರಿಯ 2:11).

ವಿರೋಧಭಾಸವೆಂಬಂತೆ ಯೇಸು ನಮ್ಮನ್ನು ವಿಮೋಚಿಸಲು ನಮ್ಮ ಸ್ವಭಾವವನ್ನು ತೆಗೆದುಕೊಂಡಂತೆಯೇ ದೈವಸ್ವಭಾವವನ್ನು ಸಹಾ ತೋರ್ಪಡಿಸಿದನು.

ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲ್ಯರ ನಿಜವಾದ ವಿಮೋಚಕನೂ ಅವರ ಸಮೀಪ ಬಂಧುವು ಯೆಹೋವನೇ ಆಗಿದ್ದನು (ಉದಾ. ಕೀರ್ತ 19:14, ಯೆಶಾಯ 41:14, ಯೆಶಾಯ 43:14, ಯೆಶಾಯ 44:22, ಯೆರೆ 31:11, ಹೋಶೇಯ 13:14).

**ಸೋಮವಾರ** **ಜನವರಿ 17**

## ಸಹೋದರರೆನ್ನುವುದಕ್ಕೆ ನಾಚಿಕೆ ಪಡದಿರುವುದು

ಇಬ್ರಿಯ ಪತ್ರಿಕೆಯು ಹೇಳುವಂತೆ ಯೇಸುಕ್ರಿಸ್ತನು ನಮ್ಮನ್ನು ತನ್ನ ಸಹೋದರರೆಂದು ಹೇಳುವುದಕ್ಕೆ ನಾಚಿಕೆ ಪಡುವುದಿಲ್ಲ (ಇಬ್ರಿಯ 2:11). ಯೇಸುವು ದೇವರ ಜೊತೆ ಇರುವವನಾದಾಗ್ಯೂ ನಮ್ಮನ್ನು ತನ್ನ ಕುಟುಂಬದ ಭಾಗವಾಗಿ ಅಪ್ಪಿಕೊಂಡಿದ್ದಾನೆ. ಈ ಒಂದು ಐಕಮತ್ಯವು ಇಬ್ರಿಯ ಪತ್ರಿಕೆಯ ಓದುಗರಿಗೆ ತಮ್ಮ ಸಮುದಾಯದಲ್ಲಿ ಕ್ರೈಸ್ತರು ಎಂಬ ಕಾರಣಕ್ಕೆ ಅನುಭವಿಸುತ್ತಿದ್ದ ಅವಮಾನವು ವ್ಯತಿರಿಕ್ತವಾದ ವಿಷಯವಾಗಿತ್ತು (ಇಬ್ರಿಯ 10:33).

ಓದಿರಿ : ಇಬ್ರಿಯ 11:24–26. ಯಾವ ರೀತಿಯಲ್ಲಿ ಮೋಶೆಯು ತೆಗೆದುಕೊಂಡ ತೀರ್ಮಾನಗಳು ಯೇಸುಕ್ರಿಸ್ತನು ನಮಗೆ ಮಾಡಿದುದಕ್ಕೆ ಮಾದರಿಯಾಗುತ್ತವೆ?

ಮೋಶೆಯು ತಾನು ಫರೋಹನ ಕುಮಾರ್ತೆಯ ಮಗನೆಂದು ಕರೆಸಿಕೊಳ್ಳುವುದರ ಅರ್ಥವೇನೆಂದು ನೀವು ಊಹೆ ಮಾಡಿಕೊಂಡಿದ್ದೀರಾ? ಆತನು ಆ ಕಾಲದ ಮಹಾಸಾಮ್ರಾಜ್ಯದ ಅತಿಪ್ರಭಾವವುಳ್ಳ ವ್ಯಕ್ತಿಯಾಗಿದ್ದನು. ಆತನು ಉನ್ನತವಾದ ಸೈನಿಕ ಮತ್ತು ಪೌರ ಶಿಕ್ಷಣ ತರಬೇತಿ ಪಡೆದು ವಿಶೇಷ ಯೋಗ್ಯತೆ ಪಡೆದವನಾಗಿದ್ದನು. ಮೋಶೆಯು ಐಗುಪ್ತದೇಶದ ಸರ್ವವಿದ್ಯೆಗಳಲ್ಲಿ ಶಿಕ್ಷಣ ಪಡೆದು ಮಾತುಗಳಲ್ಲಿಯೂ ಕಾರ್ಯಗಳಲ್ಲಿಯೂ ಸಮರ್ಥನಾದವನು ಎಂದು ಸ್ತೆಫನನು ಹೇಳುತ್ತಾನೆ (ಅ.ಕೃ 7:22). ಆತನು ಐಗುಪ್ತ ದೇಶದ ಸೇನೆಯ ಅಚ್ಚುಮೆಚ್ಚಿನ ನಾಯಕನಾಗಿದ್ದು ಫರೋಹನು ತನ್ನ ದತ್ತು ಮೊಮ್ಮಗನಾದ ಈತನನ್ನು (ಮೋಶೆಯನ್ನು) ಸಿಂಹಾಸನಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡಬೇಕೆಂದು ದೃಢತೀರ್ಮಾನ ತೆಗೆದುಕೊಂಡಿದ್ದಾನೆಂದು ಎಲೆನ್ ಜಿ ವೈಟಮ್ಮನವರೂ ಸಹಾ ಹೇಳುತ್ತಾರೆ (ನಮ್ಮ ಪೂರ್ವಜರು ಮತ್ತು ಪ್ರವಾದಿಗಳು ಪುಸ್ತಕದಲ್ಲಿ 24ನೇ ಪುಟ ನೋಡಿರಿ). ಆದಾಗ್ಯೂ ಮೋಶೆಯು ಈ ಎಲ್ಲಾ ಸವಲತ್ತುಗಳನ್ನು ತೊರೆದು ದಾಸತ್ವದಲ್ಲಿದ್ದ ಶಿಕ್ಷಣ, ಸ್ಥಾನಮಾನವಿಲ್ಲದ ಇಸ್ರಾಯೇಲ್ಯರ ಜೊತೆ ತನ್ನನ್ನು ಗುರುತಿಸಿಕೊಂಡನು.

ಓದಿರಿ : ಮತ್ತಾಯ 10:32,33, 2 ತಿಮೊಥೆ 1:8,12 ಮತ್ತು ಇಬ್ರಿಯ 13:12–15 ದೇವರು ನಮ್ಮಿಂದ ಏನನ್ನು ಕೇಳುತ್ತಾನೆ?

ಇಬ್ರಿಯ ಪತ್ರಿಕೆಯ ಓದುಗರಿಗೂ ಸಹ ಇದು ಅವರಲ್ಲಿದ್ದ ಸಮಸ್ಯೆಯ ಒಂದು ಭಾಗವಾಗಿತ್ತು. ಅವರಲ್ಲಿ ಹಿಂಸೆ ನಿಂದೆ ತಿರಸ್ಕಾರಗಳನ್ನು ಅನುಭವಿಸಿದ ಅನೇಕರು ಯೇಸುವಿನ ನಿಮಿತ್ತ ನಾಚಿಕೆಪಟ್ಟುಕೊಳ್ಳ ತೊಡಗಿದರು. ತಮ್ಮ ಕ್ರಿಯೆಗಳಲ್ಲಿ ಕೆಲವರು ಯೇಸುವನ್ನು ಗೌರವಿಸುವ ಬದಲು ಬಹಿರಂಗವಾದ ಅವಮಾನಕ್ಕೆ ಈಡು ಮಾಡುವ ಅಪಾಯದಲ್ಲಿದ್ದರು (ಇಬ್ರಿಯ 6:6). ಆದುದರಿಂದ ಪೌಲನು ತನ್ನ ಪತ್ರಿಕೆಯ ಓದುಗರಿಗೆ ನಂಬಿಕೆಯನ್ನು ಬಿಟ್ಟು ಬಿಡದೆ ಅದರಲ್ಲಿ ದೃಢವಾಗಿ ನಿಲ್ಲಿರಿ ಎಂಬುದಾಗಿ ಎಡಬಿಡದೆ ಹೇಳುತ್ತಾನೆ (ಇಬ್ರಿಯ 4:14, ಇಬ್ರಿಯ 10:23).

ಯೇಸುವನ್ನು ನಾವು ನಮ್ಮ ದೇವರು ಮತ್ತು ಸೋದರನೆಂದು ಗುರುತಿಸಬೇಕೆಂದು ದೇವರು ನಮ್ಮನ್ನು ಕೇಳುತ್ತಾನೆ. ಯೇಸುವು ನಮ್ಮ ವಿಮೋಚಕನಾಗಿ ನಮ್ಮ ಸಾಲವನ್ನು ತೀರಿಸಿದ್ದಾನೆ; ನಮ್ಮ ಸೋದರನಾಗಿ ನಾವು ಮಗನ ಪ್ರತಿರೂಪಕ್ಕನುಗುಣವಾಗಿ ಇರುವಂಥ ಜೀವಿತವನ್ನು ಮಾರ್ಗವನ್ನು ತೋರಿಸಿದ್ದಾನೆ. ಹಾಗಾಗಿ ನಾವು ನಮ್ಮ ಸೋದರರ ಪೈಕಿ ಜ್ಯೇಷ್ಠ ಪುತ್ರರಾಗಬಹುದಾಗಿದೆ (ರೋಮ 8:9).

ಯೇಸುವು ನಮ್ಮನ್ನು ತನ್ನ ಸೋದರರೆಂದು ಅಪ್ಪಿಕೊಳ್ಳುವ ತೀರ್ಮಾನ ತೆಗೆದುಕೊಂಡ ಕ್ಷಣದ ಬಗ್ಗೆ ಆಲೋಚಿಸಿರಿ. ಈ ವಿಷಯದಲ್ಲಿ ಮೋಶೆಗಿಂತಲೂ ಯೇಸುವು ತನ್ನನ್ನು ತಾನು ತಗ್ಗಿಸಿಕೊಂಡದ್ದು ಹೆಚ್ಚಿನದು ಏಕೆ? ಇದು ದೇವರು ನಮ್ಮನ್ನು ಪ್ರೀತಿ ಮಾಡುವ ಬಗ್ಗೆ ನಮಗೆ ಏನನ್ನು ಬೋಧಿಸುತ್ತದೆ?

**ಮಂಗಳವಾರ** **ಜನವರಿ 18**

## ನಮ್ಮಂತೆ ರಕ್ತಮಾಂಸಧಾರಿಯಾದನು

ಯೇಸುವು ನಮ್ಮನ್ನು ಪ್ರತಿನಿಧಿಸುವುದಕ್ಕಾಗಿ ಮತ್ತು ನಮಗಾಗಿ ಸಾಯುವುದಕ್ಕೋಸ್ಕರ ಮಾನವ ಸ್ವಭಾವವನ್ನು ಹೊಂದಿಕೊಂಡನೆಂದು ಇಬ್ರಿಯ ಪತ್ರಿಕೆಯು ಹೇಳುತ್ತದೆ (ಇಬ್ರಿ 2:9, 14–16, ಇಬ್ರಿಯ 10:5–10) ಇದು ರಕ್ಷಣಾ ಯೋಜನೆಯ ಅಸ್ತಿವಾರವೂ, ನಿತ್ಯಜೀವದ ನಿರೀಕ್ಷೆಯೂ ಆಗಿದೆ.

ಮತ್ತಾಯ 16:17, ಗಲಾತ್ಯ 1:16, 1 ಕೊರಿಂಥ 15:50 ಮತ್ತು ಎಫೆಸ 6:12ನ್ನು ಓದಿರಿ. ರಕ್ತಮಾಂಸ ಎಂಬ ಹೇಳಿಕೆಯು ಮನುಷ್ಯ ಸ್ವಭಾವದ ಯಾವ ಕೊರತೆಗಳನ್ನು ಕುರಿತು ಈ ವಚನಗಳು ಹೇಳುತ್ತವೆ?

ಮನುಷ್ಯ ಸ್ವಭಾವದಲ್ಲಿರುವ ದೌರ್ಬಲ್ಯಗಳನ್ನು, ಬಲಹೀನತೆಗಳನ್ನು ರಕ್ತಮಾಂಸವೆಂಬ ಪದವು ಒತ್ತಿ ಹೇಳುತ್ತದೆ (ಎಫೆಸ 6;12) ತಿಳುವಳಿಕೆಯ ಕೊರತೆ (ಮತ್ತಾಯ 16:17, ಗಲಾತ್ಯ 1:16), ಸಾವಿಗೆ ಒಳಗಾಗುವುದು (1 ಕೊರಿಂಥ 15:50) ಯೇಸುವು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಂತೆ ಮಾಡಲ್ಪಟ್ಟನು ಎಂದು ಇಬ್ರಿಯ ಪತ್ರಿಕೆಯು ಹೇಳುತ್ತದೆ (ಇಬ್ರಿಯ 2:17). ಯೇಸುವು ಸಂಪೂರ್ಣವಾಗಿ ನರಮನುಷ್ಯನಾದನು ಎಂಬುದನ್ನು ಈ ಹೇಳಿಕೆಯು ತಿಳಿಸುತ್ತದೆ. ಯೇಸುವು ಕೇವಲ ನೋಡುವುದಕ್ಕೆ ಅಥವಾ ಕಾಣುವುದಕ್ಕೆ ನಮ್ಮ ಹಾಗೆ ಆಗಲಿಲ್ಲ. ಆದರೆ ಸ್ವಭಾವದಲ್ಲಿ ನಿಜವಾಗಿಯೂ ನಮ್ಮಂತೆ ಆದನು.

ಆದರೆ ಪಾಪದ ವಿಷಯದಲ್ಲಿ ಮಾತ್ರ ಆತನು ನಮಗಿಂತ ಭಿನ್ನವಾಗಿದ್ದನೆಂದು ಪತ್ರಿಕೆಯು ಹೇಳುತ್ತದೆ. ಮೊದಲನೆಯದಾಗಿ ಯೇಸುವು ಪಾಪಕ್ಕೆ ಒಳಗಾಗಲಿಲ್ಲ (ಇಬ್ರಿಯ 4:15). ಎರಡನೆಯದಾಗಿ, ಆತನು ಪರಿಶುದ್ಧನೂ, ನಿಷ್ಕಳಂಕನೂ, ನಿರ್ದೋಷಿಯೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ಆದ ಮನುಷ್ಯನಾಗಿದ್ದನು ಎಂದು ಹೇಳುತ್ತದೆ (ಇಬ್ರಿ 7:26). ನಾವೆಲ್ಲರೂ ಪಾಪ ಮಾಡಿದ್ದೇವೆ, ನಮ್ಮಲ್ಲಿ ಕೆಟ್ಟ ಸ್ವಭಾವವು ಮನೆಮಾಡಿದೆ. ಪಾಪ ಮಾಡುವ ಸ್ವಭಾವವು ನಮ್ಮ ರಕ್ತದಲ್ಲಿ ಆಳವಾಗಿ ಬೇರೂರಿದೆ. ನಾವು ದೇಹಧರ್ಮಕ್ಕೆ ಒಳಗಾದವರೂ ಪಾಪದ ಸ್ವಾಧೀನದಲ್ಲಿರುವುದಕ್ಕೆ ಮಾರಲ್ಪಟ್ಟವರೂ ಆಗಿದ್ದೇವೆ (ರೋಮ 7:14 ಮತ್ತು ರೋಮ 7:15–20ನ್ನು ನೋಡಿರಿ). ನಮ್ಮಲ್ಲಿರುವ ಅಹಂಕಾರ ಮತ್ತು ಇತರೆ ಪಾಪಧೀನ ಸ್ವಭಾವಗಳು ನಮ್ಮ ಸತ್ಕಾರ್ಯಗಳನ್ನೂ ಸಹಾ ಕೆಡಿಸುತ್ತವೆ. ಆದರೆ ಯೇಸುವಿನ ಸ್ವಭಾವವು ಪಾಪದಿಂದ ಕಳಂಕಿತವಾಗಲಿಲ್ಲ (ಕೆಟ್ಟು ಹೋಗಲಿಲ್ಲ). ಇದು ಈ ರೀತಿಯಾಗಿಯೇ ಇರಬೇಕಾಗಿತ್ತು. ಯೇಸುವು ಶಾರೀರಿಕ ದುರಿಚ್ಛೆಗಳನ್ನು ಹೊಂದಿದವನಾಗಿದ್ದು ಪಾಪಾಧೀನ ಸ್ವಭಾವಕ್ಕೆ ಮಾರಲ್ಪಟ್ಟಿದ್ದರೆ ಆತನಿಗೂ ರಕ್ಷಕನ ಅವಶ್ಯಕತೆ ಇರುತ್ತಿತ್ತು. ಆದರೆ ಅದಕ್ಕೆ ಬದಲಾಗಿ ಯೇಸುವು ನಮಗೋಸ್ಕರ ತನ್ನನ್ನೇ ದೇವರಿಗೆ ನಿಷ್ಕಳಂಕವಾದ ಯಜ್ಞವನ್ನಾಗಿ ಅರ್ಪಿಸಿಕೊಳ್ಳುವುದಕ್ಕೆ ಬಂದನು (ಇಬ್ರಿಯ 7:26–28, ಇಬ್ರಿಯ 9:14).

ಆಮೇಲೆ ಆತನು ನಮ್ಮ ಪಾಪಗಳಿಗೆ ತನ್ನನ್ನು ಪಾಪರಹಿತ ಯಜ್ಞವನ್ನಾಗಿ ಸಮರ್ಪಿಸಿಕೊಂಡು ಮರಣ ಹೊಂದಿ ಪಿಶಾಚನ ಶಕ್ತಿಯನ್ನು ನಾಶಪಡಿಸಿದ್ದರಿಂದ

ನಮ್ಮ ಪಾಪಗಳಿಗೆ ಕ್ಷಮಾಪಣೆಯನ್ನೂ ದೇವರೊಂದಿಗೆ ಸಮಾಧಾನವನ್ನು ಹೊಂದುವುದಕ್ಕೆ ಸಾಧ್ಯ ಮಾಡಿದನು (ಇಬ್ರಿಯ 2:14–17). ಹಾಗೆಯೇ ಹೊಸ ಒಡಂಬಡಿಕೆಯ ಅನುಸಾರ ವಾಗ್ದಾನವನ್ನು ಪೂರೈಸುವ ಮೂಲಕ ಆಜ್ಞೆಗಳನ್ನು ನಮ್ಮ ಹೃದಯದ ಮೇಲೆ ಬರೆದು ನೀತಿಯ ಜೀವನವನ್ನು ಜೀವಿಸುವುದಕ್ಕೆ ಶಕ್ತಿಯನ್ನು ಕೊಟ್ಟನು (ಇಬ್ರಿಯ 8:10).

ಹಾಗಾಗಿ ಯೇಸುವು ವೈರಿಯನ್ನು ಸೋಲಿಸಿ ನಾವು ಜೀವಸ್ವರೂಪನಾದ ದೇವರನ್ನು ಸೇವಿಸುವಂತೆ ನಮ್ಮನ್ನು ಬಿಡುಗಡೆಗೊಳಿಸಿದ್ದಾನೆ (ಇಬ್ರಿ 9:14). ಏತನ್ಮಧ್ಯೆ ಸೈತಾನನ ಅಂತಿಮ ನಾಶನವು ಅಂತಿಮ ನ್ಯಾಯವಿಚಾರಣೆಯಾದ ಮೇಲೆ ಬರುತ್ತದೆ (ಪ್ರಕ 20:1–3,10).

ಯೇಸುವಿನಲ್ಲಿ ನಮಗೆ ಜಯವಿದೆ ಎಂಬ ವಾಗ್ದಾನವು ಇದ್ದಾಗ್ಯೂ ನಮ್ಮಲ್ಲಿ ಅನೇಕರು ಪಾಪದೊಂದಿಗೆ ಇನ್ನೂ ಹೆಣಗಾಡುತ್ತಿದ್ದೇವೆ ಏಕೆ? ನಾವು ಯಾವ ತಪ್ಪನ್ನು ಮಾಡುತ್ತಿದ್ದೇವೆ ಮತ್ತು ಕ್ರಿಸ್ತನಲ್ಲಿ ನಮಗಿರುವ ಉನ್ನತವಾದ ಕರೆಯನ್ನು ಜೀವಿಸುವುದನ್ನು ಹೇಗೆ ಆರಂಭಿಸುತ್ತೇವೆ?

**ಬುಧವಾರ ಜನವರಿ 19**

## ಬಾಧೆಗಳನ್ನು ಅನುಭವಿಸುವುದರ ಮೂಲಕ ಪರಿಪೂರ್ಣರಾಗುವುದು

ಓದಿರಿ : ಇಬ್ರಿಯ 2:10,17,18 ಮತ್ತು ಇಬ್ರಿಯ 5:8,9 ವಚನಗಳು. ಯೇಸುವಿನ ಜೀವಿತದಲ್ಲಿ ಬಾಧೆಗಳು ಯಾವ ಕಾರ್ಯವನ್ನು ನಿರ್ವಹಿಸಿದವು?

ಅಪೋಸ್ತಲನಾದ ಪೌಲನು, ದೇವರು ಯೇಸುವನ್ನು ಬಾಧೆಗಳ ಮೂಲಕ ಸಿದ್ಧಿಗೆ (ಪರಿಪೂರ್ಣ) ತಂದನು ಎಂಬುದಾಗಿ ಹೇಳುತ್ತಾನೆ. ಈ ಪತ್ರದ ಬರಹಗಾರನು ಯೇಸುವನ್ನು ದೇವರ ಪ್ರಭಾವದ ಪ್ರಕಾಶವೆಂತಲೂ ದೇವರ ಸ್ವಭಾವದ ಪ್ರತಿರೂಪವೆಂತಲೂ ಕರೆದಿದ್ದಾನೆ (ಇಬ್ರಿಯ 1:3) ಮತ್ತು ಆತನು ಪಾಪರಹಿತನು, ನಿರ್ದೋಷಿಯು, ಸದಮಲನು ಪವಿತ್ರನು (ಇಬ್ರಿಯ 4:14, ಇಬ್ರಿ 7:26–28, ಇಬ್ರಿಯ 9:14, ಇಬ್ರಿಯ 10:5–10). ಯೇಸು ಕ್ರಿಸ್ತನು ಯಾವುದೇ ರೀತಿಯ ನೈತಿಕ ಕೊರತೆಯನ್ನು ತುಂಬಿಕೊಳ್ಳುವ ಅಗತ್ಯವಿರಲಿಲ್ಲ. ಆತನು ನೈತಿಕವಾಗಿಯೂ ನಡಾವಳಿಯಲ್ಲೂ ಪರಿಪೂರ್ಣನಾಗಿದ್ದನು.

ಇಬ್ರಿಯ ಪತ್ರಿಕೆಯು ಹೇಳುವಂತೆ ಯೇಸುಕ್ರಿಸ್ತನು ಪರಿಪೂರ್ಣತೆಯ ಕ್ರಿಯೆಗೆ ಒಳಪಟ್ಟನು, ಆ ಪರಿಪೂರ್ಣತೆಯು ಆತನಿಗೆ ನಮ್ಮನ್ನು ರಕ್ಷಿಸುವ ಸಲಕರಣೆಯನ್ನು ಒದಗಿಸಿತು. ಯೇಸುವು ಪರಿಪೂರ್ಣತೆ ಸಾಧಿಸಿದನು ಎಂಬುದನ್ನು ಆತನು ನಮ್ಮ ರಕ್ಷಕನಾಗಲು ಸಜ್ಜುಗೊಂಡನು ಎಂಬರ್ಥದಲ್ಲಿ ಹೇಳಬಹುದು.

1) ಯೇಸುಕ್ರಿಸ್ತನು ಬಾಧೆಗಳ ಮೂಲಕ ಪರಿಪೂರ್ಣನಾದನು. ಆದ್ದರಿಂದ ಆತನು ನಮ್ಮ ರಕ್ಷಣೆಗೆ ಮುಖಂಡನಾದನು (ನಾಯಕನಾದನು) (ಇಬ್ರಿಯ 2:10). ನಮ್ಮ ರಕ್ಷಣಾರ್ಥವಾಗಿ ದೇವರ ನ್ಯಾಯಬದ್ಧ ಮಾಧ್ಯಮವಾಗಲು ಯೇಸುವು ಶಿಲುಬೆಯ ಮೇಲೆ ಬಲಿಯಾದನು. ಯೇಸುಕ್ರಿಸ್ತನು ಮಾತ್ರ ಪರಿಪೂರ್ಣವಾದ ಯಜ್ಞವನ್ನು ಸಮರ್ಪಿಸಿದನು. ಯೇಸುವು ದೇವರಾಗಿ ನಮಗೆ ನ್ಯಾಯತೀರ್ಪು ಮಾಡುತ್ತಾನೆ; ಆದರೆ ಆತನು ತನ್ನನ್ನೇ ತಾನು ಯಜ್ಞ ಸಮರ್ಪಣೆ ಮಾಡಿಕೊಂಡದ್ದರಿಂದ ನಮ್ಮನ್ನು ರಕ್ಷಿಸಬಲ್ಲವನಾಗಿದ್ದಾನೆ.

2) ಯೇಸುಕ್ರಿಸ್ತನು ಬಾಧೆಗಳ (ಕಷ್ಟಾನುಭವಗಳ) ಮೂಲಕ ವಿಧೇಯತೆಯನ್ನು ಕಲಿತನು (ಇಬ್ರಿಯ 5:8). ವಿಧೇಯತೆ ಎರಡು ಕಾರಣಗಳಿಗೆ ಅವಶ್ಯಕವಾಗಿದೆ. ಮೊದಲನೆಯ ಕಾರಣವೇನೆಂದರೆ ವಿಧೇಯತೆಯು ಆತನ ಯಜ್ಞವನ್ನು (ಬಲಿ ಸಮರ್ಪಣೆಯನ್ನು) ಸ್ವೀಕಾರಾರ್ಹವಾಗಿ ಮಾಡಿತು (ಇಬ್ರಿಯ 9:14, ಇಬ್ರಿಯ 10:5–10). ಎರಡನೆಯ ಕಾರಣ. ಆತನು ಅನುಭವಿಸಿದ ಬಾಧೆಗಳು ಆತನನ್ನು ನಮ್ಮ ಮಾದರಿಯನ್ನಾಗಿಸಿದವು (ಇಬ್ರಿಯ 5:9). ಯೇಸುಕ್ರಿಸ್ತನು ವಿಧೆಯತೆಯನ್ನು ಕಲಿತನು. ಯಾಕೆಂದರೆ ವಿಧೇಯತೆಯ ಅನುಭವ ಅವನಿಗೆ ಅದುವರೆಗೆ ಆಗಿರಲಿಲ್ಲ. ಆತನು ದೇವರಾಗಿ ಯಾರಿಗೆ ತಾನೆ ವಿಧೇಯನಾಗಿರಬೇಕಾಗಿತ್ತು? ಆತನು ನಿತ್ಯನಾದ ಮಗನಾಗಿಯೂ ದೇವರಲ್ಲಿ ಒಂದಾಗಿಯೂ ಆತನು ಈ ಜಗತ್ತನ್ನು ಆಳುವ ರಾಜನಾಗಿಯೂ ವಿಧೇಯನಾದನು. ಆದ್ದರಿಂದ ಯೇಸುಕ್ರಿಸ್ತನು ಅವಿಧೇಯತೆಯಿಂದ ವಿಧೇಯತೆಗೆ ಬರಲಿಲ್ಲ, ಆದರೆ ಸಾರ್ವಭೌಮತ್ವದಿಂದ, ಆಳ್ವಿಕೆಯಿಂದ ಅಧೀನತೆ ಮತ್ತೆ ವಿಧೇಯತೆಗೆ ಬಂದನು.

ಉನ್ನತಿಗೇರಿಸಲ್ಪಟ್ಟ ದೇವರ ಮಗನ ವಿಧೇಯತೆಗೊಳಗಾದ ಮನುಷ್ಯನ ಮಗ (ಮನುಷ್ಯಕುಮಾರ)ನಾದನು.

3) ಬಾಧೆಗಳು ಶೋಧನೆಗಳು ಮತ್ತು ಜಯಶಾಲಿಯಾದ ಅನುಭವಗಳು ಯೇಸುವನ್ನು ಕರುಣಾಶಾಲಿಯಾದ ನಂಬಿಗಸ್ತ ಮಹಾಯಾಜಕನನ್ನಾಗಿ ಮಾಡಿದವು (ಇಬ್ರಿ 2:17,18). ಕಷ್ಟಬಾಧೆಗಳಿಂದ ಯೇಸುವು ಕರುಣೆಯುಳ್ಳ–ವನಾಗಲಿಲ್ಲ. ಆದರೆ ಆತನು ಕರುಣೆಯುಳ್ಳವನಾದುದರಿಂದ ಕಷ್ಟಬಾಧೆಗಳನ್ನು ಸಹಿಸಿಕೊಂಡು ನಮ್ಮನ್ನು ರಕ್ಷಿಸುವ ಸಲುವಾಗಿ ಸ್ವಇಚ್ಛೆಯಿಂದ ಶಿಲುಬೆಯ ಮರಣವನ್ನು ಹೊಂದಿದನು (ಇಬ್ರಿಯ 10:5–10)ನ್ನು ರೋಮ 5:7,8 ಕ್ಕೆ ಹೋಲಿಸಿರಿ). ಆದಾಗ್ಯೂ ಬಾಧೆಗಳ ಮೂಲಕವೇ ಯೇಸುಕ್ರಿಸ್ತನ ಭ್ರಾತೃ ಪ್ರೇಮದ (ಸೋದರ ಪ್ರೀತಿ) ವಾಸ್ತವತೆಯು ನಿಜವಾಗಿಯೂ ವ್ಯಕ್ತವಾಯಿತು ಮತ್ತು ತೋರಿಬಂತು.

ಪಾಪರಹಿತನಾಗಿಯೂ ಯೇಸುಕ್ರಿಸ್ತನು ಬಾಧೆಗೊಳಪಟ್ಟನು. ನಾವು ಪಾಪಿಗಳಾಗಿ ಖಂಡಿತವಾಗಿಯೂ ಬಾಧೆಪಡಲೇಬೇಕು.

ತನ್ನ ಪ್ರೀತಿಯನ್ನು ನಮ್ಮ ಮೇಲೆ ಬಲಯುತವಾಗಿ ಅನೇಕ ರೀತಿಯಲ್ಲಿ ಹೊರತು ಪಡಿಸಿದ ಕರ್ತನಾದ ಯೇಸುಕ್ರಿಸ್ತನಿಂದ ನಿರೀಕ್ಷೆ ಭರವಸೆಗಳನ್ನು ಪಡೆದುಕೊಳ್ಳುತ್ತಿರುವ ಸಮಯದಲ್ಲಿ ನಮ್ಮ ಜೀವಿತದಲ್ಲಿ ಘಟಿಸುವ ದುರಂತಗಳನ್ನು ಸಹಿಸಿಕೊಳ್ಳಲು ಹೇಗೆ ಕಲಿತುಕೊಳ್ಳಬಹುದು?

**ಗುರುವಾರ** **ಜನವರಿ 20**

## ಮಾದರಿಯಾದ ಸೋದರನು

ನಮಗೆ ಉದಾಹರಣೆಯಾಗುವುದಕ್ಕೆ ಯೇಸುಕ್ರಿಸ್ತನು ತನ್ನಲ್ಲಿ ಮನುಷ್ಯರ ಸ್ವಭಾವವನ್ನು ಧರಿಸಿಕೊಂಡು ನಮ್ಮ ಮಧ್ಯೆ ವಾಸಿಸಿದನು. ದೇವರ ಸಮ್ಮುಖದಲ್ಲಿ ಸರಿಯಾದ ಜೀವಿತವನ್ನು ಜೀವಿಸುವ ರೀತಿ ಯಾವುದು ಎಂದು ನಮಗೆ ತೋರಿಸುವ ಏಕೈಕ ಮಾದರಿ ಆತನೇ ಆಗಿದ್ದಾನೆ.

ಓದಿರಿ : ಇಬ್ರಿಯ 12:1–4 ವಚನಗಳು. ಅಪೋಸ್ತಲನಾದ ಪೌಲನ ಪ್ರಕಾರ ನಾವು ನಮ್ಮ ಕ್ರೈಸ್ತ ಜೀವನದ ಓಟವನ್ನು ಹೇಗೆ ಓಡಬೇಕು?

ಈ ವಚನಗಳಲ್ಲಿ ಅಪೋಸ್ತಲನು ಹೇಳಿರುವ ನಂಬಿಕೆಗೆ ಉದಾಹರಣೆಯಾದ ವ್ಯಕ್ತಿಗಳ ದೀರ್ಘ ಪಟ್ಟಿಯು ಯೇಸುವಿನ ಹೆಸರಿನಿಂದ ಕೊನೆಗೊಳ್ಳುತ್ತದೆ. ಈ

ವಚನಗಳಲ್ಲಿ ಯೇಸುವನ್ನು ನಂಬಿಕೆ ಹುಟ್ಟಿಸುವವನೂ ಅದನ್ನು ಪೂರೈಸುವನೆಂದು ಕರೆಯುತ್ತದೆ.

ಆರ್ಕಿಗಾಸ್ (ಸ್ಥಾಪಕ) ಎಂಬ ಗ್ರೀಕ್ ಪದವನ್ನು 'ಮೊದಲಿಗ' ಎಂತಲೂ ಅನುವಾದಿಸಬಹುದು. ಯೇಸುವು ವಿಶ್ವಾಸಿಗಳ ಮುಂದಾಗಿ ಓಡುವವನಾಗಿದ್ದಾನೆ ಎಂಬ ಅರ್ಥದಲ್ಲಿ ಆತನನ್ನು ಮೊದಲಿಗ ಎಂದು ಹೇಳಬಹುದು. ಸತ್ಯವೇನೆಂದರೆ ಯೇಸುವನ್ನು ಮೊದಲ ಓಟಗಾರನೆಂದ ಇಬ್ರಿಯ 6:20ನೇ ವಚನ ಹೇಳುತ್ತದೆ. 'ಪರಿಪೂರ್ಣ'ನು ಎಂಬ ಪದವು ಯೇಸುಕ್ರಿಸ್ತನು ದೇವರಲ್ಲಿ ಶ್ರೇಷ್ಠ ಮಟ್ಟದ ಶುದ್ಧ ನಂಬಿಕೆಯನ್ನು ತೋರ್ಪಡಿಸಿದನೆಂಬ ಆಲೋಚನೆಯನ್ನು ಕೊಡುತ್ತದೆ. ಈ ವಾಕ್ಯವೃಂದವು ಯೇಸುವು ಯಶಸ್ವಿಯಾಗಿ ಓಟವನ್ನು ಓಡಿಮುಗಿಸಿದವರಲ್ಲಿ ಮೊದಲಿಗನು ಮತ್ತು ನಂಬಿಕೆಯ ಜೀವಿತವನ್ನು ಜೀವಿಸುವ ಕಲೆಯಲ್ಲಿ ಪರಿಪೂರ್ಣನಾದವನು ಎಂದು ಹೇಳುತ್ತದೆ.

"ಪುನಃ ನಾನು ದೇವರ ಮೇಲೆ ಭರವಸವಿಟ್ಟವನಾಗಿರುವೆನು. ಪುನಃ ಇಗೋ, ನಾನೂ ದೇವರು ನನಗೆ ದಯಪಾಲಿಸಿರುವ ಮಕ್ಕಳೂ ಇದ್ದೇವೆ" ಎಂಬುದಾಗಿ ಇಬ್ರಿಯ 2:13 ಹೇಳುತ್ತದೆ. ಇಲ್ಲಿ ಯೇಸುಕ್ರಿಸ್ತನು ತಾನು ದೇವರ ಮೇಲೆ ಭರವಸವಿಡುತ್ತೇನೆಂದು ಹೇಳುತ್ತಾನೆ. ಈ ಉಲ್ಲೇಖವು ಪರೋಕ್ಷವಾಗಿ ಯೆಶಾಯ 8:17,18ನ್ನು ಸೂಚಿಸುತ್ತದೆ.

ಯಹೂದ್ಯದ ಅರಸನಿಗೆ ಇಸ್ರಾಯೇಲ್ ಮತ್ತು ಆರಾಮ್ಯ ಭಯಂಕರ ಬೆದರಿಕೆ ಉಂಟಾದ ಸಂದರ್ಭದಲ್ಲಿ ಯೆಶಾಯನು ಈ ಮಾತುಗಳನ್ನು ಹೇಳುತ್ತಾನೆ (ಯೆಶಾಯ 7:1,2). ಯೆಶಾಯನ ಭರವಸೆಗೆ ವ್ಯತಿರಿಕ್ತವಾಗಿ ಅರಸನಾದ ಅಹಾಜನು ಅಪನಂಬಿಕೆ ಉಳ್ಳವನಾಗಿದ್ದಾನೆ (2 ಅರಸು 16:5–18). ದೇವರು ತನ್ನ ಮೇಲೆ ಭರವಸವಿಡುವಂತೆ ಅಹಾಜನಿಗೆ ಎಚ್ಚರಿಕೆ ನೀಡಿದನು ಮತ್ತು ಆತನನ್ನು ದೇವರು ರಕ್ಷಿಸುತ್ತಾನೆಂಬುದಕ್ಕೆ ಗುರುತು ಕೇಳಿಕೋ ಎಂದು ಹೇಳಿದನು (ಯೆಶಾಯ 7:1–11).

ಕ್ರಿಸ್ತನು ದಾವೀದನ ಮಗನಾಗಿ ಅಹಾಜನನ್ನು ತನ್ನ ಸ್ವಂತ ಮಗನಂತೆ ಸಂರಕ್ಷಿಸುವುದಾಗಿ ದೇವರು ಆತನಿಗೆ ಮೊದಲೇ ವಾಗ್ದಾನ ಮಾಡಿದ್ದನು. ಈವಾಗ ದೇವರು ಅಹಾಜನ ಮೇಲೆ ಕರುಣೆಯುಳ್ಳವನಾಗಿ ತನ್ನ ವಾಗ್ದಾನವನ್ನು

ದೃಢಪಡಿಸುವದಕ್ಕೋಸ್ಕರ ಏನಾದರೊಂದು ಗುರುತನ್ನು ಕೇಳಿಕೊಳ್ಳೆಂದು ಅಹಾಜನಿಗೆ ಹೇಳಿದನು. ಅಹಾಜನು ಯಾವುದೇ ಗುರುತನ್ನು ಕೇಳಿಸಿಕೊಳ್ಳಲಿಲ್ಲ. ಅದಕ್ಕೆ ಬದಲಾಗಿ ಅಶ್ಶೂರದ ಅರಸನಾದ ತಿಗ್ಲತ್ಪಿಲೆಸರನ ಬಳಿಗೆ ತನ್ನ ದೂತರನ್ನು ಕಳುಹಿಸಿ ಅವನಿಗೆ ನಾನು ನಿನ್ನ ದಾಸನೂ ಮಗನೂ ಆಗಿದ್ದೇನೆ. ನೀನು ಬಂದು ನನ್ನನ್ನು ನನಗೆ ವಿರೋಧವಾಗಿ ಎದ್ದಿರುವ ಆರಾಮ್ಯರ ಮತ್ತು ಇಸ್ರಾಯೇಲ್ಯರ ಅರಸುಗಳ ಕೈಗೆ ಸಿಕ್ಕದಂತೆ ತಪ್ಪಿಸು ಎಂದು ಕೇಳಿಸಿದನು (2 ಅರಸು 16:7) ಎಂಥಾ ದುಃಖಕರವಾಗಿದೆ! ಅಹಾಜನು ದೇವರ ಮಗನಾಗುವುದಕ್ಕೆ ಒಪ್ಪದೆ ತಿಗ್ಲತ್ಪಿಲೆಸರನ ಮಗನಾಗಲು ಸಿದ್ಧನಾದನು.

ಯೇಸುವು ದೇವರಲ್ಲಿ ಮತ್ತು ಆತನ ವಾಗ್ದಾನದಲ್ಲಿ ಭರವಸವಿಟ್ಟು ತನ್ನ ವೈರಿಗಳನ್ನು ತನ್ನ ಪಾದದ ಕೆಳಗೆ ಇಡುತ್ತಾನೆಂದು ನಂಬಿದನು (ಇಬ್ರಿಯ 1:13, ಇಬ್ರಿಯ 10:12,13). ದೇವರು ನಮಗೂ ಸಹ ಅದೇ ವಾಗ್ದಾನವನ್ನು ಮಾಡುವವನಾಗಿದ್ದಾನೆ, ನಾವು ಆತನನ್ನು ಯೇಸುವು ನಂಬಿದಂತೆ ನಂಬಬೇಕು (ರೋಮ 16:20).

ನಾವು ಪ್ರತಿನಿತ್ಯವೂ ಮಾಡುವ ಆಯ್ಕೆಗಳಲ್ಲಿ ಇಂತಹ ನಂಬಿಕೆಯನ್ನು ಪ್ರತಿಫಲಿಸಲು ದೇವರಲ್ಲಿ ನಂಬಿಕೆ ಇಡಲು ಹೇಗೆ ಕಲಿತುಕೊಳ್ಳಬಲ್ಲೆವು? ಮುಂದೆ ನೀವು ಎಂತಹ ಪ್ರಾಮುಖ್ಯವಾದ ಆಯ್ಕೆಗಳನ್ನು ಮಾಡಿಕೊಳ್ಳುವಿರಿ ಅದು ಹೇಗೆ ದೇವರಲ್ಲಿ ನೀವಿಟ್ಟಿರುವ ನಂಬಿಕೆಯನ್ನು ತೋರಿಸುತ್ತದೆ ಎಂದು ಖಾತ್ರಿಪಡಿಸುತ್ತದೆ?

**ಶುಕ್ರವಾರ** **ಜನವರಿ 21**

**ಹೆಚ್ಚಿನ ಚಿಂತನೆಗೆ :** ಇಬ್ರಿಯ 2:13ನೇ ವಚನವು ಯೇಸುವು ತನ್ನ ಸೋದರರ ಬಗ್ಗೆ ದೇವರ ಜೊತೆ ಆಡುವ ಮಾತುಗಳನ್ನು ಒಳಗೊಂಡಿದೆ. "ಇಗೋ ನಾನೂ ಮತ್ತು ನೀನು ನನಗೆ ಕೊಟ್ಟಿರುವ ಸೋದರರೂ ಇದ್ದೇವೆ (ಇಬ್ರಿಯ 2:13). ಪ್ಯಾಟ್ರಿಕ್ ಗ್ರೇ ಹೇಳುವಂತೆ ಯೇಸುಕ್ರಿಸ್ತನನ್ನು ತನ್ನ ಸೋದರರ ಪೋಷಕನಂತೆ ಬಣ್ಣಿಸಲಾಗಿದೆ. ರೋಮನ್ ಪದ್ಧತಿ Tutela Impuberum ಪ್ರಕಾರ ತಂದೆಯು ಮರಣ ಹೊಂದಿದ ಮೇಲೆ ಅಪ್ರಾಪ್ತ ವಯಸ್ಸಿನ ಸೋದರ ಸೋದರಿಯರನ್ನು ಸಾಕಿ ಸಲುಹುವ ಜವಾಬ್ದಾರಿಯು ಹಿರಿಯ ಅಣ್ಣನ ಮೇಲೆ ಬೀಳುತ್ತದೆ. ತಂದೆಯ ಆಸ್ತಿಗೆ ಹಕ್ಕುದಾರನಾಗಿ ತಂದೆಯ ಸ್ಥಾನದಲ್ಲಿ ನಿಂತು ಮನೆಯನ್ನು ಮುನ್ನಡೆಸುವ ಕರ್ತವ್ಯವನ್ನು ಮತ್ತು ತನ್ನ ಒಡಹುಟ್ಟಿದವರ ಪೋಷಕನಾಗುವ ಸ್ಥಾನವನ್ನು

ಪಡೆಯುತ್ತಾನೆ. ಈ ಕಾರಣದಿಂದ ನಮ್ಮನ್ನು ಯೇಸುವಿಗೆ ಸೋದರರೆಂದು ಮತ್ತು ಆತನ ಮಕ್ಕಳೆಂದು ಇಬ್ರಿಯ ಪತ್ರಿಕೆಯಲ್ಲಿ ಸೂಚಿಸುತ್ತದೆ. ಹಿರಿಯ ಅಣ್ಣನಾಗಿ ಯೇಸುವು ನಮ್ಮ ಗುರುವೂ ಪೋಷಕನೂ ರಕ್ಷಕನೂ ಆಗಿದ್ದಾನೆ.

"ಮಾನವ ಸ್ವಭಾವವನ್ನು ಧರಿಸಿಕೊಂಡು ಮಾನವನ ಪ್ರತಿನಿಧಿಯಾಗಿ ನಿಂತು ಮನುಷ್ಯನನ್ನು ದೇವರ ಸ್ವರೂಪದಲ್ಲಿ ಸೃಷ್ಟಿಯಾದವನದು ತಂದೆ ಮತ್ತು ಮಗನ ಜೊತೆ ಸಂಬಂಧ ಹೊಂದಿದವನೆಂದು ದೈವ ವಿಧಿಸುವ ಪ್ರತಿಯೊಂದು ಕರ್ತವ್ಯವನ್ನು ಪಾಲಿಸಬಲ್ಲವನೆಂದು ಮಹಾಹೋರಾಟದಲ್ಲಿ ಸೈತಾನನಿಗೆ ತೋರಿಸುವುದಕ್ಕೆ ಯೇಸುವು ಈ ಭೂಮಿಗೆ ಬಂದನು" – ಎಲೆನ್ ಜಿ ವೈಟಮ್ಮನವರ ಸೆಲೆಕ್ಟಡ್ ಮೆಸೇಜಸ್ 1ನೇ ಪುಸ್ತಕದಲ್ಲಿ 253ನೇ ಪುಟ.

"ಯೇಸುವು ತನ್ನ ಜೀವನ ಮತ್ತು ಬೋಧನೆಗಳಲ್ಲಿ ದೇವರಿಂದ ಹುಟ್ಟಿದ ನಿಸ್ವಾರ್ಥ ಸೇವೆಗೆ ಒಂದು ಪರಿಪೂರ್ಣವಾದ ಮಾದರಿಯನ್ನು ಕೊಟ್ಟಿದ್ದಾನೆ. ದೇವರು ತನ್ನಷ್ಟಕ್ಕೆ ತಾನು ಜೀವಿಸುವವನಲ್ಲಿ ಲೋಕಲೋಕಗಳನ್ನು ಸೃಷ್ಟಿಸಿ ಅವುಗಳಲ್ಲಿರುವ ಸಮಸ್ತವನ್ನು ಎತ್ತಿಹಿಡಿದು ನಿರಂತರವಾಗಿ ಸೇವೆಗೈಯ್ಯುತ್ತಿದ್ದಾನೆ. ಆತನು ಸೂರ್ಯನನ್ನು ಕೆಟ್ಟವರ ಮೇಲೂ ಒಳ್ಳೆಯವರ ಮೇಲೂ ಮೂಡಿಸುತ್ತಾನೆ ಮತ್ತು ನೀತಿವಂತರ ಮೇಲೂ ಅನೀತಿವಂತರ ಮೇಲೂ ಮಳೆಯನ್ನು ಸುರಿಸುತ್ತಾನೆ (ಮತ್ತಾಯ 5:45). ಇದೇ ಆದರ್ಶವುಳ್ಳ ಸೇವೆಯನ್ನು ದೇವರು ತನ್ನ ಮಗನಿಗೆ ವಹಿಸಿದ್ದಾನೆ. ಮಾನವತೆಯ ತಲೆಯಾಗಿ ನಿಲ್ಲಲು ಯೇಸುವನ್ನು ನಮಗೆ ಕೊಡಲ್ಪಟ್ಟಿದ್ದಾನೆ. ಆತನು ತನ್ನ ಉದಾಹರಣೆಯಿಂದ ಸೇವೆಗೈಯ್ಯುವುದೆಂದರೆ ಏನೆಂಬುದನ್ನು ನಮಗೆ ಬೋಧಿಸುತ್ತಾನೆ" – ಎಲೆನ್ ಜಿ ವೈಟಮ್ಮನವರ ದಿ ಡಿಸೈರ್ ಆಫ್ ಏಜಸ್ ಪುಸ್ತಕದಲ್ಲಿ 649ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1) ಯೇಸುವು ನಮ್ಮನ್ನು ರಕ್ಷಿಸುವ ಸಲುವಾಗಿ ನಮಗೆ ಸೋದರನಾದನೆಂದು ಇಬ್ರಿಯ ಪತ್ರಿಕೆ ನಮಗೆ ಹೇಳುತ್ತದೆ. ದೇವರು ನಮ್ಮನ್ನು ರಕ್ಷಿಸಲು ಏನು ಮಾಡಿದನೆಂಬುದರ ಬಗ್ಗೆ ಆಲೋಚಿಸಿರಿ. ಇಂತಹ ವಾಸ್ತವತೆಗೆ ನಮ್ಮ ಬೆನ್ನನ್ನು ತಿರುಗಿಸುವುದು (ತಿರಸ್ಕಾರ ಮಾಡುವುದು) ಒಂದು ದೊಡ್ಡ ಪ್ರಮಾದವಾಗುತ್ತದೆ ಏಕೆ?

2) ಯೇಸುವು ನಮ್ಮಂತೆ ಪಾಪದ ಸ್ವಾಧೀನದಲ್ಲಿರುವುದಕ್ಕೆ ಮಾರಲ್ಪಟ್ಟನಾಗಿ ಹುಟ್ಟಲಿಲ್ಲ ಎಂಬುದು ಯಾಕೆ ಮುಖ್ಯವಾಗಿದೆ (ರೋಮ 7:14)? ಮೋಶೆಯ ಬಗ್ಗೆ ಆಲೋಚಿಸಿರಿ, ತಮ್ಮಂತೆ ಮೋಶೆಯು ಗುಲಾಮನಲ್ಲ (ದಾಸತ್ವದಲ್ಲಿ ಬಿದ್ದಿಲ್ಲ) ಎಂದು ಇಸ್ರಾಯೇಲ್ಯರು ತಿಳಿದುಕೊಳ್ಳುವುದು ಬಹಳ ಮುಖ್ಯವಾಗಿತ್ತು ಏಕೆ? ಒಂದು ಸಣ್ಣ ರೀತಿಯಲ್ಲಿ ಮೋಶೆಯ ಕಥೆಯು ಯೇಸುವು ನಮಗಾಗಿ ಏನು ಮಾಡಿದನೆಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ ಹೇಗೆ?

3) ನಮ್ಮ ಜೀವಿತದಲ್ಲಿ ಕಷ್ಟ ಬಾಧೆಗಳು ವಹಿಸುವ ಪಾತ್ರದ ಬಗ್ಗೆ ಹೆಚ್ಚಾಗಿ ಆಲೋಚಿಸಿರಿ. ಕಷ್ಟ ಬಾಧೆಗಳಿಂದ ಕೆಲವು ಸಲ ಒಳ್ಳೆಯ ಪರಿಣಾಮಗಳು ಆದಾಗ್ಯೂ ಕಷ್ಟ ಬಾಧೆಗಳು ತಮ್ಮಷ್ಟಕ್ಕೆ ತಾವು ಒಳ್ಳೆಯವು ಎಂದು ನಾವು ಯೋಚಿಸಬಾರದು ಯಾಕೆ?